RegdNo B G155

"Sn"

(156)2

24—8—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆ ಸಿಂಸ್ಕೇಡಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣಂರಾವ್ 2 ಪೈಸೆ

ಆತೆಯನ್ನೇ ಮದುವೆಯಾದ !

ಮೆಲ್ಬೋರ್ನ್— ಪೂರ್ವ ನ್ಯೂಗಿನಿಯಲ್ಲಿ ಒಬ್ಬ ಎರಡನೇ ಹೆಂಡತಿಯನ್ನು ವಿವಾಹವಾದಾಗ, ಅವಳ ತಾಯಿಯೂ ತನ್ನ ಮನೆಯಲ್ಲಿರಲು ಅವಕಾಶ ಕೊಟ್ಟನು ; ಅತ್ತೇ ಮತ್ತು ಅಳಿಯ ನಿಗೆ ಕ್ರಮೇಣ ಪ್ರೇಮ ಬೆಳೆಯಿತು ; ಈಗ ಅವಳನ್ನು ತನ್ನ ಮೂರನೇ ಹೆಂಡತಿಯಾಗಿ ವಿವಾಹವಾದನು ; ಸ್ವಾರಸ್ಯವೆಂದರೆ ಗಂಡನೂ ಅದುದರಿಂದ ಜೊತೆಗೆ ತಾನೇ ತನ್ನ ಮಾವನೂ ಆದ !

ನೆರೆ ಹಾವಳಿ

ರಾಬರ್ಟ್— ದಕ್ಷಿಣ ಮರಕೇಶದಲ್ಲಿ ಕಣಿವೆಯಲ್ಲಿ ಅಕಸ್ಮಿಕ ನೆರೆಹಾವಳಿಯಲ್ಲಿ 22 ಜನ ಮಡಿದು ಅನೇಕರು ನಾಪತ್ತೆಯಾಗಿರುವರು

ವಿವಾಹಮಹೋತ್ಸವ

ಸೌ || ಪದ್ಮಾವತಿ, ಬಿ. ಎ (ಶ್ರೀ ಕೆ. ವೆಂಕಟನಾರಯ್ಯನವರ ಪುತ್ರಿ) ಮತ್ತು ಚಿ || ಎಸ್. ಸಿ.ಬ್ಬಣ್ಣ, ಬಿ ಎಸ್ಸಿ (ಬೆಂಗಳೂರಿನ ಡಾ || ಹೆಚ್. ಕೆ. ಶ್ರೀನಿವಾಸರಾಯರ ಪುತ್ರ) ಇವರ ವಿವಾಹದ ಹೋಕ್ಷವು ಭಾನುವಾರ ವೈಭವವಾಗಿ ನೆರವೇರಿತು.

★ ಸ್ವತಂತ್ರ ಪಕ್ಷದ ಶ್ರೀ ಮಸಾನಿಯವರು ನಿನ್ನೆ ಕೇಂದ್ರ ಮಂತ್ರಿಮಂಡಲದ ಮೇಲೆ ಅವಿಶ್ವಾಸ ಸೂಚಿಸಿ, ಟೀಕಾಪ್ರಹಾರ ಕಿಸಿದಾಗ ದಾಳಿ ದೆಸೆಯಿಂದ ನಾವು ಸಹಾಯಕರ ಕಡೆ ನೋಡಬೇಕು ಎಂದು ನುಡಿದರು

★

ವೈದ್ಯಜ್ಞ ಶಿಖಾಮಣಿ

ಅಸ್ಥಾನವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯವ್ಯಪಕ್ತ, ಜ್ಯೋತಿರ್ವಿದ್ವನ್ಮಣಿ ಸಂಪತ್ಕೃಷ್ಣಜೋಯಿಸರಿಂದ

25 ಬುಧವಾರ : ಚತುರ್ದಶಿ ಪುಷ್ಯ

ಕುರಿಗಳಿಗೂ ಸಂತತಿ ನಿಯಂತ್ರಣ

ಹೋಬರ್ಟ್— ಆಸ್ಟ್ರೇಲಿಯಾದಲ್ಲಿ ಕುರಿಗಳಿಗೆ ಸಂತತಿ ನಿಯಂತ್ರಣ ಮಾತ್ರೆಗಳನ್ನು ಕ್ಷಿಪ್ರದಲ್ಲೇ ಉದಯೆಳೀಗಿಸಲಿರುವರೆಂದು ಪ್ರಕಟವಾಗಿದೆ

ಬದಲಾವಣೆಯಿಲ್ಲ

ನವದೆಹಲಿ— ಮುಂದಿನ ಚುನಾವಣೆಯವರೆಗೆ ರಾಜ್ಯಗಳಲ್ಲಿ ಬದಲಾವಣೆಯಿಲ್ಲವೆಂದು ಕಾಂಗ್ರೆಸು ಅಧ್ಯಕ್ಷ ಕಾಮರಾಜರು ಹೇಳಿದರು

ಕೆಲಸದಿಂದ ವಜಾ

ನವದೆಹಲಿ— ಕೇಂದ್ರ ಸರಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿ ಶಾಖೆಯು ಮೂರುಕಟ್ಟಿ ಅಸಿಸ್ಟೆಂಟಂತಿದ್ದ ಎಕ್ ಎಲ್ ಬೇದಿಯವರು 55 ರಿಂದ 58 ರವರೆಗೆ ಕೋಕಾಧಿಕಾರಿಯಾಗಿ ಕೆಲಸ ಮಾಡತ್ತಿದ್ದಾಗ ರೂ 15637—07 ದುರುಪಯೋಗ ಪಡಿಸಿಕೊಂಡಿದ್ದಕ್ಕಾಗಿ ಕೆಲಸದಿಂದ ವಜಾಮಾಡಲಾಗಿದೆ

★

ಕಮ್ಯೂನಿಸ್ಟು ಡೆಟಿನೂಗಳ ಸಂಖ್ಯಾಂಕ್ಕೆ ಅಲೋಯಿಸ್ಸು ಕೊಡಬೇಕಾಗಿಲ್ಲವೆಂದೂ, ದಯಾಪಂತೆಯಿಂದ ತಾವು ಕೊಡುತ್ತಿರುವುದಾಗಿಯೂ ಆಂಧ್ರ ಮುಖ್ಯ ಮಂತ್ರಿಗಳು ಶಾಸನಸಭೆಯಲ್ಲಿ ಹೇಳಿದರು

ಆಹಾರಧಾನ್ಯ ವಶ

ಬೆಂಗಳೂರು— ಮೂರು ದಿನಗಳ ಹಿಂದೆ ಚನ್ನಪಟ್ಟಣದಲ್ಲಿ ಪೋಲೀಸರು ಒಂದು ಅಕ್ಕಿ ಗಿರಣಿಯನ್ನು ಶೋಧಿಸಿದಾಗ 12000 ಪೌಂಡ್ ತೂಕದ ದಿಕ್ಕೆಲ್ಲರು ಪೂರಾ ದಿದ್ದ ಪದಾರ್ಥಗಳನ್ನು ಪತ್ತೆ ಮಾಡಿ ಸಿ ಕೊಂಡರು.

ಪಂಜಾಬಿ ಸುಭಾಕ್ಕೆ ಬೆಂಬಲಿಸದವರೂ ಇದಾರೆ

ಚಂಡೀಗಢ— ರಾಜ್ಯದ ವಿವಿಧ ಸಾರ್ವಜನಿಕ ಅಭಿಪ್ರಾಯದ ನಾಯಕರು ಪಂಜಾಬಿ ಸುಭಾಕ್ಕೆ ಬೆಂಬಲಿಸುತ್ತಿಲ್ಲವೆಂದು ಮುಖ್ಯ ಮಂತ್ರಿ ರಾಮು ಕೆಷ್ಣ ಹೇಳಿದರು.

★

ಲಕ್ಷಾಧೀಶತು

ನವದೆಹಲಿ— 2ಲಕ್ಷ ವೇಲ್ಪಟ್ಟು ಆಸ್ತಿ ಇರುವ 233 ಮಂದಿಗೆ ಸ್ತಿ ತೆರಿಗೆ ವಿಧಿಸಲಾಗಿರುವದಾಗಿ ಮಂದಿಯಾಗಿದೆ

ಆಣೆಕಟ್ಟು ಉಡಾಯಿ ಸಲಾಗುವುದು

ಸೈಗಾನ್— ಉತ್ತರ ವಿಯಟ್ನಾಮಿನಲ್ಲಿ ಭತ್ತದ ಗದ್ದೆಗಳಿಗೆ ನೀರು ಒದಗಿಸುವ ಆಣೆಕಟ್ಟುಗಳನ್ನು ಉಡಾಯಿಸಲು ಅಮೇರಿಕಾ ನಿರ್ಧರಿಸಿದೆ

ಪಂಜಾಬಿ ಸುಭಾಕ್ಕಾಗಿ ಸ್ವಾಗತಾರ್ಹಣೆ

ಅನ್ಯತಸರದಲ್ಲಿ ಅಕಾಲಿ ನಾಯಕ ಸಂತ್ ಫತೇಸಿಂಗರು ಬಹಿರ್ಗಸಭೆಯಲ್ಲಿ ಮಾತನಾಡುತ್ತಾ, ಸರಕಾರವು ಸೆಪ್ಟೆಂಬರ್ 10 ರೊಳಗೆ ಪಂಜಾಬಿ ಸುಭಾ ಸ್ಥಾಪನೆಯ ವ್ಯವಸ್ಥೆ ಮಾಡದಿದ್ದರೆ ತಾವು ಅಂದಿನಿಂದ 15 ದಿನದ ಉಪವಾಸ ಕೈಗೆಗಳ್ಳುವುದಾಗಿಯೂ, ತಮ್ಮ ಆರೋಗ್ಯ ಕೆಟ್ಟಿರುವುದರಿಂದ ಈ ಕಾಲದಲ್ಲಿ ಉಳಿಯುವ ಸಂಭವವಿಲ್ಲವೆಂದೂ ಹಾಗೂ ಉಳಿದರೆ 16 ನೇ ದಿನವೆ ಅಗ್ನಿಯಲ್ಲಿ ಪ್ರಾಣಾರ್ಪಣೆ ಮಾಡುವುದಾಗಿ ಹೇಳಿದರು — ಸುಭಾ ಸ್ಥಾಪನೆಗೆ ಪ್ರಾಣಾರ್ಪಣೆಗೆ ಸ್ವಯಂಸೇವಕರಾಗಿ ಅವರ ಹೆಸರಿಗೆ ನೂರು ಮಂದಿ ಮುಂದಾಗಿ ಬಂದರು.

ಫಾತೇಸಿಂಗರಿಗೆ ಮನವಿ

ನವದೆಹಲಿ— ಕಾಶ್ಮೀರ ಪರಿಸ್ಥಿತಿ ಉತ್ಕಟವಾಗಿರುವುದರಿಂದ ನಿವೃತ್ತ ಉಪರಾಷ್ಟ್ರಪತಿ ಡಾ || ಎಸ್ ರಾಧಾಕೃಷ್ಣನ್ ಅವರು ಸಂತ ಫತೇಸಿಂಗರಿಗೆ ಮನವಿ ಮಾಡಿದ್ದಾರೆ

ಕೊಲ್ಲಪ್ಪಟ್ಟರು

ನವದೆಹಲಿ— ಚುಬ್ ಭಾಗದಲ್ಲಿ ಮೊನ್ನೆ 12 ಮಂದಿ ಧಾಳಿಗಾರರು ಕೊಲ್ಲಪ್ಪಟ್ಟರು

ಸದಬರಾಜಿಲ್ಲ

ಶ್ರೀನಗರ— ಪಾಕಿಸ್ತಾನದ ಧಾಳಿಕಾರರು ಪಂಬರಾಜಿಲ್ಲದೆ ಪಂದಾಡುತ್ತಿದ್ದಾರೆ

★ ಉತ್ತರ ಪ್ರದೇಶ ಮಂತ್ರಿ ಶ್ರಿ ಚತುರ್ಭುಜ ಶರ್ಮರು ತಾಜೀನಾನೆ ಇತ್ತರು

ನೈವೇದ್ಯ ಭುಂಜಿಸಿದ ಗುರುವಾಯೂರಪ್ಪ

(ಮುಂದುವರಿಯುವುದು)

ಬಾಲಕನ ದುಃಖ ಮೇರೆ ಮೀರಿತು ; ವಿಷಣ್ಣವದನನಾಗಿ ಪ್ರಾರ್ಥಿಸಿದ ' ಹೇ ಸ್ವಾಮಿನ್ ! ಗೋಜಿಗುಬ್ಬಿಯಾದ ಭಕ್ಷ್ಯಗಳಿವೆ , ಏಕೆ ಭುಂಜಿಸಲೊಲ್ಲೆ ? ಉಣ್ಣದಿದ್ದರೆ ಹಸಿವೆಯಿಂದ ಕಂಗೆಟ್ಟ ನಿನ್ನ ಶರೀರ ಕೃಶವಾಗದೇ ? ಸ್ವಾಮಿನ್ ದಯಮಾಡಿ ಸ್ವೀಕರಿಸು ; ನನ್ನ ತಂದೆ ಬಂದರೆ ಅವರು ನನ್ನಲ್ಲಿ ಕೋಪಿಸುವರಿಂದು '

ಮತ್ತೂ ನೈವೇದ್ಯ ಅಂತೆಯೇ ಉಳಿದಾಗ ಬಾಲಕನ ದುಃಖವು ಕಟ್ಟೆಯೊಡೆದು ಅಳುಬಂದಿತು ; ಸ್ವಾಮಿ ನಿರುಪಾಯನಾದ : ಭಕ್ತಾಭೀಷ್ಟವನ್ನು ಸಲ್ಲಿಸುವ ಸ್ವಾಮಿ ಮನ್ನನೆ ಕಾಳಜಿಯಿಂದುವುದೆಂತು ? ನೈವೇದ್ಯವೆಲ್ಲವನ್ನೂ ಭುಂಜಿಸಿದ ! ಬಾಲಕನು ಆನಂದಭರಿತನಾಗಿ ಕರ್ತವ್ಯ ಪಾಲನೆಯ ಧನ್ಯತೆಯಿಂದ ಖಾಲಿಯಾದ ಪಾತ್ರೆಗಳನ್ನು ತೆಗೆದುಕೊಳಿಸಿ ಮುಂದಿನ ನೈವೇದ್ಯಕ್ಕಾಗಿ ಹೊರಗೆ ತಂದಿಟ್ಟ.

ಕ್ಷೇತ್ರದ ಪೂಜಾರಿಯಾದಿಗಿಂತೂ ಖಾಲಿ ಪಾತ್ರೆಗಳನ್ನು ಕಂಡಾಗ ಬಾಲಕನ ಮೇಲೆ ಸಿಟ್ಟೇ ಬಂದಿತು ; ಗರ್ಭಗುಡಿಯೊಳಗೆ ಕಾಳಿಕುಕೊಂಡು ಬಾಲಕನೊಬ್ಬನೇ ಭುಂಜಿಸಿದನೆಂದರಿತು ಅವರು ಬಾಲಕನ ಮೇಲೆ ಹರಿಹಾಯ್ದರು : ನನ್ನ ತಂದೆಯೊಡೆನೆ ಹೇಳಿ ಶಾಸ್ತಿಮಾಡಿಸುವೆವೆಂದು ಗದರಿಸಿದರು ; ಆದರೆ ಬಾಲಕನಿಗೆ ಇದೊಂದೂ ಅರ್ಥವಾಗಲೆಲ್ಲದು !

ಮರಳಿ ಬಂದ ನಂಬೂದರಿಯವರಿಗೆ ವಿಷಯಗಳನ್ನಾಲಿಸಿದಾಗ ಆಶ್ಚರ್ಯವಾಯಿತು ; ಆದರೆ ಅದೇ ಬಾಲಕನ ಮೇಲೆ ಕ್ರೋಧವಾಗಿ ಮಾರ್ಪಟ್ಟಿತ : ಬಾಲಕನ ಅಧಿಕ ಪ್ರಸಂಗ (!) ಪ್ರತೀಕಾರವಾಗಿ ಬೆಕ್ಕಿನಿಂದ ತಿಕ್ಕಿಸಲುದ್ಯುಕ್ತರಾದಾಗ- ಅದೇನು ? ಅಶರೀರವಾಣಿ ? ಎಲ್ಲರೂ ಕಿವಿಗೊಟ್ಟಾಲಿಸಿದರು !

ಎಲೈ ಭಕ್ತರೇ, ನಿರ್ದೋಷಿ ಬಾಲಕನನ್ನು ತಿಕ್ಕಿಸಬೇಡಿ ! ನೈವೇದ್ಯವನ್ನು ಭುಂಜಿಸಿದವನು ನಾನೇ, ಅತನಲ್ಲ ; ಭಕ್ತರ ಕೋರಿಕೆಯನ್ನೆಂದೂ ತಿರಸ್ಕರಿಸದ ನಾನು ಆ ಮುಗ್ಧ ಬಾಲಕನ ಕಳಕಳಿಯ ಕರೆಯನ್ನು ಮನ್ನಿಸದಿರುವುದೆಂತು ?'

ಎಲ್ಲರೂ ಸ್ತಬ್ಧಿ ಭೂತರಾದರು ; ಬಾಲಕನ ಭಕ್ತಿಗೂ ಸ್ವಾಮಿಯ ಭಕ್ತಿವಾತ್ಸಲ್ಯಕ್ಕೂ ತಲೆದೂಗಿದ ಅವರು ಸ್ವಾಮಿಯನ್ನು ಏಕಾಸ್ಯತೆಯಿಂದ ಸ್ತುತಿಸತೊಡಗಿದರು.

ಮನುಷ್ಯನು ಮನ ಮೈರಲ್ಲಿ ಭೇದವೆಣಿಸಿದರೂ ಭಗವಂತನು ಭೇದವೆಣಿಸಲಾರ ; ಒಡವ-ಸಿರಿವಂತ, ಪಂಡಿತ-ಪಾಮರ, ಬ್ರಾಹ್ಮಣ-ಅಬ್ರಾಹ್ಮಣ ವೃದ್ಧ-ಬಾಲ, ಸ್ತ್ರೀಪುರುಷ, ಎಂಬ ಭೇದವಿಡದೆ ಭಕ್ತಿಯಿಂದ ಭಜಿಸಿದ ಪ್ರತಿಯೋರ್ವನ ಮೇಲೂ ಭಗವಂತನ ಕೃಪಾಕಟಾಕ್ಷ ವಿದೆಯೆನ್ನುವುದಕ್ಕೆ ಇದು ಎಷ್ಟೊಂದು ಒಳ್ಳೆಯ ನಿದರ್ಶನ !

॥ ಶ್ರೀ ಕೃಷ್ಣಾರ್ಪಣಮಸ್ತು ಶುಭಂ ಭವತು ॥ [ಪ್ರಭಾತ]

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಪುಡಚ್ಚಾಂಡ್ 20—8—65 ರಿಂದ
ಅನೋಘ ಆರಂಭ

ಕಾಬಿಖಾನ್ (ಹಿಂದಿ) **Kabli Khan**

ಅಜಿತ್, ಹೆಲೆನ್, ಮುಖ್ರಿ, ಜಯಂತ್ ಪಾತ್ರವಹಿಸಿರುವ

.... ಅತ್ಯನೋಘ ಹಿಂದಿ ಚಿತ್ರ ....

ಸಂಗೀತ : ಚಿತ್ರಗುಪ್ತ. — [ಪ್ರತಿ ದಿನ 3 ಪ್ರದರ್ಶನಗಳು

ಅಪರೂ— 22-8—65 ರಿಂದ

— ಅನೋಘ ಕನ್ನಡ ಪೌರಾಣಿಕ ಚಿತ್ರ —

ನಾಗಪೂಜಾ

ನಟವರ್ಗ— ರಾಜಕುಮಾರ್, ಲೀಲಾವತಿ, ರಾಜಶ್ರೀ

SHAKTI

SUDHA

A Superb Tonic



Protect the Cow

ಗೋಸಂರಕ್ಷಣೆ ಮುಖ್ಯ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬರಲಿ ಸಡೆಯ

Edited, Printed & Published by Dharmaprachara niratha M S Krishna Rao (Proprietor) at the Satyavadi Press Chamarajapuram, Mysore-4